ಕರ್ನಾಟಕ ವಿಧಾನ ಸಭೆ

ಗುರುವಾರ ದಿನಾಂಕ ೩೧ನೇ ಮಾರ್ಚ್ ೧೯೮೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೩೦ ಗಂಟೆಗೆ ಸಭಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು.—ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಹೆಚ್. ಬಿ. ಚಾವ್ಹಲಸಯ್ಯನವರು ದಿನಾಂಕ ೩೦-೩-೮೪ರಂದು ನಿಧನರಾದರೆಂದು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತೇನೆ.

ಶ್ರೀಯುತರು ನಾಲ್ಕನೇ ವಿಧಾನಸಭೆಗೆ ಹಾಸನ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಹಾಸನದ ಮುನಿಸಿಪಲ್ ಕೌನ್ಸಿಲ್‌ನ ಅಧ್ಯಕ್ಷರಾಗಿಯೂ ಮೈಸೂರಿನ ಸಣ್ಣ ಕೈಗಾರಿಕಾ ಸಲಹಾ ಮಂಡಲಿಯ ಸದಸ್ಯರಾಗಿಯೂ ಮತ್ತು ವಿವಿಧ ಸಹಕಾರಿ ಬ್ಯಾಂಕುಗಳ ಸಂಘಗಳಲ್ಲಿ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ಸ್ಮರಣಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಸದನದ ಸಮಿತಿಗಳನ್ನು ನೇಮಕ ಮಾಡಿರುವ ಬಗ್ಗೆ

ಶ್ರೀ ಪಾಟಾಳ್ ನಾಗರಾಜ್.—೧೨ ಜನ ಸದಸ್ಯರ ಒಂದು ಸದನ ಸಮಿತಿಯನ್ನು ಮಾಡಿದ್ದೀರಿ. ಆದರಲ್ಲಿ ೧೦ ಜನ ಕಾಂಗ್ರೆಸ್ ಸದಸ್ಯರು ಇದ್ದಾರೆ. ನಿಮಗೆ ಒಪ್ಪಿಗೆ ಕೊಡದೇ ಇರತಕ್ಕಂಥ ಬಿಜೆಪಿ ಪಕ್ಷದ ಸದಸ್ಯರೊಬ್ಬರನ್ನು ಹಾಕಿದ್ದೀರಿ. ಹಾಗೆಯೇ ಒಪ್ಪಿಗೆ ಕೊಡದೇ ಇರತಕ್ಕಂಥ ಜನತಾ ದಳದ ಒಬ್ಬ ಸದಸ್ಯರನ್ನು ಹಾಕಿದ್ದೀರಿ. ಯಾರಿಗೂ ಸ್ವರ ಸ್ವಾಮಿ ಇದು ? ಈ ರೀತಿ ನ್ಯಾಯಾಂಗ ತನಿಖೆ ಸಡೆಸಬೇಕೆಂದು ನಿಮ್ಮ ಸರ್ಕಾರದ ನಿರ್ಧಾರವೇನಾದರೂ ಇದೆಯೇ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಸರ್ಕಾರವನ್ನು ನಂಬಿಕೊಂಡು ಒಂದು ಸಮಿತಿಯನ್ನು ಮಾಡಿ ಎಂದು ಹೇಳಿದರೆ ಈ ರೀತಿ ಯದ್ವಾತದ್ವ ಆಡಳಿತ ಪಕ್ಷದ ಸದಸ್ಯರನ್ನು ಹಾಕಿ ಸಮಿತಿಯನ್ನು ಮಾಡುವುದರ ಅಗತ್ಯವಿಲ್ಲ. ನಾವು ಹೊರಗಡೆ ಹೋಗುತ್ತಿದ್ದೇವೆ.

ಶ್ರೀ ಪಾಟಾಳ್ ನಾಗರಾಜ್.—ಇದನ್ನು ನಾವು ವಿನೋದ ಪೂರ್ಣ ಧರಣಿ ಮಾಡುತ್ತೇವೆ. ಇದು ಯಾರಿಗೆ ಬೇಕಾಗಿದೆ.